ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ,ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-260969
ಜನವರಿ - ಮಾರ್ಚ್ 2009

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ : tkvk@taralabalu.org,
dvgtkvk@yahoo.com.
ಸಂಪುಟ 2. ಸಂಚಿಕೆ : 2


## ಸಿಂಚನಕ್ಕೆ ಮುನ್ನ

ಎಲ್ಲರೂ ಮಳೆಗಾಲವನ್ನು ಕಾತರದಿಂದ ನಿರೀಕ್ಷಿಸುತ್ತಿರುವಾಗ, ಈ ತ್ರೈಮಾಸಿಕ ಪತ್ರಿಕೆ ಉಪಯುಕ್ತ ಮಾಹಿತಿ ಹೊತ್ತು ನಿಮ್ಮ ಕೈ ಸೇರುತ್ತಿದೆ. ಕಳೆದ ಮೂರು ತಿಂಗಳುಗಳಲ್ಲಿ ಕೈಗೊಂಡ ಪ್ರಮುಖ ಕಾರ್ಯ ಚಟುವಟಿಕೆಗಳನ್ನು ತಿಳಿಸುವುದರ ಜೊತೆಗೆ ಮುಂದಿನ ಋತುವಿಗೆ ಅಗತ್ಯವಿರುವ ತಂತ್ರಜ್ಞಾನ ಅಂಶಗಳನ್ನು ಇದರಲ್ಲಿ ನೀಡಲಾಗಿದೆ. ತರಳಬಾಳು ಹುಣ್ಣಿಮೆ ಮಹೋತ್ಸವ, ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ಪ್ರತ್ಯೇಕವಾಗಿ ಆಯೋಜಿಸಲಾಗಿದ್ದ ಕೃಷಿ ಮತ್ತು ಕೈಗಾರಿಕಾ ಮೇಳ ತುಂಬಾ ಯಶಸ್ವಿಯಾಗಿ ಮೂಡಿ ಬಂದಿತ್ತು. ಲಕ್ಷಾಂತರ ಜನರು ಆ ಒಂಭತ್ತು ದಿನಗಳ ಉತ್ಸವ ಮತ್ತು ಮೇಳದಲ್ಲಿ ಭಾಗವಹಿಸಿ, ಅನೇಕ ಹೊಸ ಮಾಹಿತಿ ಮತ್ತು ವಸ್ತುಗಳನ್ನು ಪಡೆದುಕೊಂಡರು. ಅಭೂತಪೂರ್ವವಾಗಿ ಮೂಡಿ ಬಂದಂಥಹ ಈ ಮೇಳವು, ತರಳಬಾಳು ಕೃಷಿ ವಿಜ್ಞಾನ ಕೇಂದ್ರವನ್ನು ಅಸಂಖ್ಯ ಜನರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿತ್ತು. ನಮ್ಮ ಈ ಮೊದಲ ಪ್ರಯತ್ನ, ಶ್ರೀ ಜಗದ್ಗುರುಗಳ ಆಶೀರ್ವಾದ ಮತ್ತು ಮಾರ್ಗದರ್ಶನದಿಂದ ಫಲಕಾರಿಯಾಗಿದ್ದು, ನಮಗೆಲ್ಲರಿಗೂ ಬಹಳ ಸಂತೋಷ ತಂದಿದೆ. ಇದೇ ಖುಷಿ ಮತ್ತು ಹುರುಪಿನಿಂದ ಮುಂದುವರೆದು, ಬರುವ ವರ್ಷಕ್ಕೆ ಹೊಸ ಮತ್ತು ಉಪಯುಕ್ತ ಚಟುವಟಿಕಾ ಯೋಜನೆಯನ್ನು ತಯಾರಿಸುವ ಕಾರ್ಯದಲ್ಲಿ ನಾವೀಗ ಮಗ್ನರಾಗಿದ್ದೇವೆ. ಇತನ್ಮಧ್ಯೆ, ನಮ್ಮ ವಿಜ್ಞಾನಿ ಮಿತ್ರರು ದೂರ ಪ್ರದೇಶಗಳ ವೈಜ್ಞಾನಿಕ ಸಂಸ್ಥೆಗಳಿಗೆ ತೆರಳಿ, ಉನ್ನತ ತರಬೇತಿ ಪಡೆದು ಬಂದಿರುತ್ತಾರೆ. ಹೀಗೆ ಪಡೆದಿರುವ ಹೊಸ ಜ್ಞಾನವನ್ನು ದಾವಣಗೆರೆ ಜಿಲ್ಲೆಯ ರೈತ ಸಮುದಾಯಕ್ಕೆ ಸಹಕಾರವಾಗಲೆಂದು ಉಪಯೋಗಿಸಲು ಸದಾ ಉತ್ಸುಕರಾಗಿರುವ ನಮಗೆಲ್ಲರಿಗೂ ನಿಮ್ಮ ಪ್ರೋತ್ಸಾಹ ಮತ್ತು ಹಾರೈಕೆಗಳ ಅಗತ್ಯವಿದೆ. ಇದೇ ತಾನೆ ಆರಂಭವಾಗಿರುವ ಹೊಸ ಯುಗಾದಿಯ ಶುಭ ಹಾರೈಕೆಗಳೊಂದಿಗೆ ನಿಮ್ಮೆಲ್ಲರಿಗೂ ವಂದನೆಗಳು.

–ಸಂಪಾದಕರು

ನಿಸರ್ಗದ ಜೊತೆ ಸಾಮರಸ್ಯದ ಹೆಜ್ಜೆ,
ಮೆಕ್ಕೆ ಭತ್ತದ ಜೊತೆಗೆ ನವಣೆ ಸಜ್ಜೆ,
ಗೊಬ್ಬರ ಮೇವಿನ ಗಿಡವಿರಲಿ ಬದುಗಳಲಿ.
ಶಾಂತಿ ನೆಮ್ಮದಿ ನೀಡುವ ಕೃಷಿ ಬದುಕಿರಲಿ,





❍ ದಾವಣಗೆರೆಯಲ್ಲಿ ದಿನಾಂಕ 1 ರಿಂದ 9 ಫೆಬ್ರುವರಿ 2009 ರವರೆಗೆ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು ಆಯೋಜಿಸಲಾಯಿತು. ಕೇಂದ್ರದ ಕೃಷಿ ಪ್ರದರ್ಶನದಲ್ಲಿ 1,00,000 ಕ್ಕೂ ಹೆಚ್ಚು ರೈತರು, ಮಹಿಳೆಯರು ಮತ್ತು ಶಾಲಾ ಮಕ್ಕಳು ಕೃಷಿ ಹಾಗೂ ಕೃಷಿಯೇತರ ಸಂಬಂಧಿತ ವಿಷಯಗಳ ಬಗ್ಗೆ ಸಲಹೆಗಳನ್ನು ಪಡೆದಿರುತ್ತಾರೆ.









ಮಾತೃ ಸಂಸ್ಥೆ : ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ 577 541, ಚಿತ್ರದುರ್ಗ ತಾ॥ ದೂರವಾಣಿ : 08192-268829 ಮಿಂಚಂಚೆ : trdf@taralabalu. org

## ವಿಶೇಷ ಕಾರ್ಯಕ್ರಮಗಳು:



- ಕೇಂದ್ರದವತಿಯಿಂದ ಮೊದಲಬಾರಿಗೆ ದಿನಾಂಕ 10-01-2009 ರಂದು ಕೇಂದ್ರದ ಕದಳೀವನದಲ್ಲಿ **"ತರಳಬಾಳು ಕೆವಿಕೆ ಸಂತೆ"**ಯನ್ನು ಪ್ರಾರಂಭಿಸಲಾಗಿದ್ದು ಪ್ರತಿ ಶನಿವಾರ ಮಧ್ಯಾಹ್ನ 2.30 ರಿಂದ 6 ಗಂಟೆಯವರೆಗೆ ನಡೆಯುತ್ತದೆ. ಇದರಲ್ಲಿ ಹಲವಾರು ರೈತರು/ರೈತ ಮಹಿಳೆಯರು ಹಾಗೂ ಸ್ವ ಸಹಾಯ ಸಂಘದ ಮಹಿಳೆಯರು ತಾವೇ ತಯಾರಿಸಿದ ಉತ್ಪನ್ನಗಳನ್ನು ಮತ್ತು ತರಕಾರಿಗಳನ್ನು ಯಶಸ್ವಿಯಾಗಿ ಮಾರಾಟ ಮಾಡುತ್ತಿದ್ದಾರೆ. ದಾವಣಗೆರೆ ನಾಗರೀಕರು ಈ ಸಂತೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. →

- ಅತ್ತಿಗೆರೆಯಲ್ಲಿರುವ ಸಂಸ್ಥೆಯ **'ಪಟೇಲ್ ನಂದ್ಯಪ್ಪ ಹೊರಟ್ಟಿ ಗೌಡ್ರ ಕಲ್ಲಪ್ಪ ಪ್ರೌಢಶಾಲಾ'** ಆವರಣದಲ್ಲಿ **ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು,** ಅನುದಾನಿತ ಯೋಜನೆಯ ಅಡಿಯಲ್ಲಿ ನಿರ್ಮಿಸಿರುವ **ಎರೆಹುಳು ಗೊಬ್ಬರ ಘಟಕಕ್ಕೆ** ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಗೌರವ ಸಲಹಾಗಾರರಾದ ಡಾ. ಕೆ.ಪಿ. ಬಸವರಾಜ, ಶ್ರೀಯುತ ಕುಸುಗೂರ ಹಾಗೂ ಶ್ರೀಯುತ ಸಿ.ಟಿ.ಚಂದ್ರಪ್ಪ ಇವರು ದಿನಾಂಕ 7-02-2009 ರಂದು ಭೇಟಿ ನೀಡಿ ಕೇಂದ್ರದ ಕಾರ್ಯವನ್ನು ಶ್ಲಾಘಿಸಿದರು. ಅಂದು ಕೇಂದ್ರದ ಕದಳೀವನದಲ್ಲಿ ಅಭಿವೃದ್ಧಿಪಡಿಸಲಾದ ಎರೆಹುಳುಗಳನ್ನು ಅತ್ತಿಗೆರೆ ಎರೆಹುಳು ಘಟಕಕ್ಕೆ ಬಿಡಲಾಯಿತು. ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ.ಎನ್., ವಿಜ್ಞಾನಿಗಳಾದ ಡಾ. ಪ್ರದೀಪ್ ಹೆಚ್. ಎಂ., ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಶ್ರೀ ರಘುರಾಜ ಜೆ. ಇವರು ಉಪಸ್ಥಿತರಿದ್ದರು.



ಅನುಭವ ಮಂಟಪ ಶಾಲೆಯ ಮಕ್ಕಳು ಎರೆಹುಳು ಗೊಬ್ಬರ ತಯಾರಿಕಾ ಘಟಕವನ್ನು ವೀಕ್ಷಿಸುತ್ತಿರುವುದು.



ಪಶುಪಾಲನಾ ಇಲಾಖೆ ಮತ್ತು ಸಾರುಡಿ ಸಂಸ್ಥೆಯ ಸಹಯೋಗ ದೊಂದಿಗೆ **ಪಶುಚಿಕಿತ್ಸಾ ಶಿಬಿರವು** ದಾವಣಗೆರೆ ತಾಲ್ಲೂಕು ಅವರಗೆರೆಯಲ್ಲಿ ನಡೆಯಿತು. 500 ರಾಸುಗಳಿಗೆ ಕಾಲುಬಾಯಿ ಬೇನೆಗೆ, ಜಂತು ಹುಳುವಿಗೆ ಚುಚ್ಚುಮದ್ದು ನೀಡಲಾಯಿತು. 100 ಕ್ಕೂ ಹೆಚ್ಚು ರಾಸುಗಳಿಗೆ ವಿವಿಧ ಖಾಯಿಲೆಗಳಿಗೆ ಚಿಕಿತ್ಸೆ ನೀಡಲಾಗಿದೆ.

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು:

- ರಾಷ್ಟ್ರೀಯ ಸಮ ವಿಕಾಸ ಯೋಜನೆಯಡಿಯಲ್ಲಿ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ದಾವಣಗೆರೆ ಪ್ರಾಯೋಜಿತ 'ಸುಧಾರಿತ ಸಮಗ್ರ ಹೈನುಗಾರಿಕೆ ಮತ್ತು ಇತರೆ ಕೃಷಿ ಪದ್ಧತಿಗಳು' ಕುರಿತ 3 ದಿನಗಳ ಒಟ್ಟು 4 ಕೌಶಲ್ಯ ತರಬೇತಿ ಕಾರ್ಯಕ್ರಮಗಳಲ್ಲಿ ದಾವಣಗೆರೆ, ಹರಿಹರ, ಹೊನ್ನಾಳಿ ಮತ್ತು ಹರಪನಹಳ್ಳಿ ತಾಲ್ಲೂಕಿನ ಸ್ವ-ಸಹಾಯ ಸಂಘದ ಒಟ್ಟು 367 ರೈತ/ರೈತ ಮಹಿಳೆಯರಿಗೆ ತರಬೇತಿ ನೀಡಲಾಗಿದೆ.

- ದಿನಾಂಕ 09-01-09 ರಂದು ಈಚಘಟ್ಟದಲ್ಲಿ ನಡೆದ **"ಶಿವಮೊಗ್ಗ ಹಾಲು ಉತ್ಪಾದಕರ ಸಹಕಾರ ನಿಗಮ"** ರವರ ಆಯೋಜಿತ ತರಬೇತಿ ಕಾರ್ಯಕ್ರಮದಲ್ಲಿ **"ಎರೆಹುಳು ಗೊಬ್ಬರ ತಯಾರಿಕೆ ವಿಧಾನಗಳು"** ಎಂಬ ವಿಷಯದ ಬಗ್ಗೆ ಕೇಂದ್ರದ ವಿಜ್ಞಾನಿಗಳಾದ ಶ್ರೀ ಮಲ್ಲಿಕಾರ್ಜುನ ಬಿ.ಓ. ಹಾಗೂ ಡಾ. ಪ್ರದೀಪ್ ಹೆಚ್. ಎಂ. ರವರು ತರಬೇತಿ ಹಾಗೂ ಉಪನ್ಯಾಸ ನೀಡಿದರು. →



## ಸಂಪನ್ಮೂಲ ವ್ಯಕ್ತಿಗಳಾಗಿ ಕೇಂದ್ರದ ವಿಜ್ಞಾನಿಗಳು:

- ದಿನಾಂಕ 16-01-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ರೈತ ತರಬೇತಿ ಕಾರ್ಯಕ್ರಮದಲ್ಲಿ ಡಾ. ಪ್ರದೀಪ್ ಹೆಚ್.ಎಂ. ಹಾಗೂ ಶ್ರೀ ಬಸವನಗೌಡ ಎಮ್. ಜಿ. ಭಾಗವಹಿಸಿ, ಉಪನ್ಯಾಸ ನೀಡಿದರು.
- ದಿನಾಂಕ 27-1-2009 ಕೆ.ವಿ.ಕೆ. ಶಿವಮೊಗ್ಗದಲ್ಲಿ ನಡೆದ NFDB ತರಬೇತಿ ಕಾರ್ಯಕ್ರಮದಡಿಯಲ್ಲಿ ಮೀನು ಕೃಷಿಯ ಆರ್ಥಿಕತೆ, ಬಗ್ಗೆ ಉಪನ್ಯಾಸ ಡಾ. ಟಿ.ಎನ್. ದೇವರಾಜ್
- ದಿನಾಂಕ 17-02-2009 ಮತ್ತು 18-02-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ 'ಸುರಕ್ಷಿತ ಕೀಟನಾಶಕಗಳ ಬಳಕೆ' ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞ ಶ್ರೀ ಪ್ರಸನ್ನ ಕುಮಾರ್ ಎನ್ ಭಾಗವಹಿಸಿ, ಉಪನ್ಯಾಸ ನೀಡಿದರು.
- ದಿನಾಂಕ 19-2-2009 ರಂದು ಜುವಾರಿ ಪ್ರೈವೇಟ್ ಲಿಮಿಟೆಡ್, ಬಳ್ಳಾರಿ, ಇವರ ಸಂಯುಕ್ತಾಶ್ರಯದಲ್ಲಿ ಗೊಬ್ಬರ ಮತ್ತು ಕೀಟನಾಶಕಗಳ ವ್ಯಾಪಾರಿಗಳಿಗೆ ಒಂದು ದಿನದ ತರಬೇತಿಯನ್ನು ನೀಡಲಾಯಿತು - ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಡಾ. ಪ್ರದೀಪ್ ಹೆಚ್. ಎಂ.

- ದಿನಾಂಕ 27-02-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ರೈತ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಮಣ್ಣು ತಜ್ಞ ಡಾ. ಪ್ರದೀಪ್ ಹೆಚ್.ಎಂ. ಹಾಗೂ ಸಸ್ಯ ಸಂರಕ್ಷಣಾ ತಜ್ಞ ಶ್ರೀ ಪ್ರಸನ್ನ ಕುಮಾರ್ ಎನ್. ಭಾಗವಹಿಸಿ, *"Soil conservation in dryland and pest management in agriculture crops"* ಬಗ್ಗೆ ಉಪನ್ಯಾಸ ನೀಡಿದರು.
- ದಿನಾಂಕ 2-3-2009 ರಂದು ಜೆ.ಸಿ.ಐ. ದವನ ಮಹಿಳಾ ಸ್ವಸಹಾಯ ಸಂಘದ ಸದಸ್ಯರುಗಳಿಗೆ "**ಗೃಹ ತ್ಯಾಜ್ಯ ವಸ್ತುಗಳಿಂದ ಎರೆಹುಳು ಗೊಬ್ಬರ ತಯಾರಿಕೆ ಮತ್ತು ಕೈ ತೋಟದಲ್ಲಿ ಉಪಯೋಗಿಸುವ ವಿಧಾನ**" - ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಡಾ. ಪ್ರದೀಪ್ ಹೆಚ್. ಎಂ.



- ದಿನಾಂಕ 19-3-2009 (ಎರೆಬೂದಿಹಾಳು, ಹರಿಹರ ತಾ||), 21-3-2009 (ಆಲೂರು, ದಾವಣಗೆರೆ ತಾ||) ಮತ್ತು 24-03-09 (ಬಿಳ್ಚೋಡು, ಜಗಳೂರು ತಾ||) - ತೋಟಗಾರಿಕೆ ಇಲಾಖೆ (ಜಿಲ್ಲಾ ಪಂಚಾಯತ್), ತೆಂಗು ಅಭಿವೃದ್ಧಿ ಯೋಜನೆಯಡಿ ನಡೆದ ಜಾಗೃತಿ ಶಿಬಿರದಲ್ಲಿ ಕೇಂದ್ರದ ಶ್ರೀ ಬಸವನ ಗೌಡ, ಡಾ. ಪ್ರದೀಪ್ ಹೆಚ್. ಎಂ. ಮತ್ತು ಶ್ರೀ ಪ್ರಸನ್ನ ಕುಮಾರ್ ಎನ್. ಇವರುಗಳು ಭಾಗವಹಿಸಿ ಉಪನ್ಯಾಸ ಮತ್ತು ಕ್ಷೇತ್ರಭೇಟಿ.
- ದಿನಾಂಕ 26-3-2009 ಕೆ.ವಿ.ಕೆ. ದೃಷ್ಟಿ ಕೋನದಲ್ಲಿ ಕೃಷಿ ಕ್ಷೇತ್ರದ ಪ್ರಸ್ತುತ ಸಮಸ್ಯೆಗಳನ್ನು ನಿರ್ವಹಿಸುವ ಪರಿ ಬಗ್ಗೆ ಉಪನ್ಯಾಸ ಡಾ. ಟಿ. ಎನ್. ದೇವರಾಜ್ . M.A. Economics ವಿದ್ಯಾರ್ಥಿಗಳು P.G. Center , Tholahunse.

## ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ ಕಾರ್ಯಗಾರಗಳು/ಕಮ್ಮಟಗಳು/ವಿಚಾರ ಸಂಕಿರಣಗಳು/ಸಭೆಗಳು/ತರಬೇತಿ ಕಾರ್ಯಕ್ರಮಗಳು:

- ದಿನಾಂಕ 5-01-2009 ರಿಂದ 10-01-2009 ರವರೆಗೆ ಕೇಂದ್ರದ ವಿಸ್ತರಣಾ ತಜ್ಞರಾದ ಶ್ರೀ ರಘುರಾಜ ಜೆ. ರವರು MANAGE ಮತ್ತು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ "Process Documentation for Development Personnel" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- ದಿನಾಂಕ 24-02-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ *"Bi-monthly meeting"* ದಲ್ಲಿ ಕೇಂದ್ರದ ಮುಖ್ಯಸ್ಥರೊಂದಿಗೆ, ಸಸ್ಯ ಸಂರಕ್ಷಣಾ ತಜ್ಞರು, ತೋಟಗಾರಿಕಾ ತಜ್ಞರು, ವಿಸ್ತರಣಾ ತಜ್ಞರು ಭಾಗವಹಿಸಿದ್ದರು.
- ಜೆ.ಎಸ್.ಎಸ್. ಕೃಷಿ ವಿಜ್ಞಾನ ಕೇಂದ್ರ, ಸುತ್ತೂರುನಲ್ಲಿ ದಿನಾಂಕ 3-3-2009 ರಿಂದ 6-3-2009 ರ ವರೆಗೆ ವಲಯ ಸಂಯೋಜನಾ ಘಟಕ, ಬೆಂಗಳೂರು ಇವರು ಆಯೋಜಿಸಿದ *"Orientation programme on Assessment, Refinement and Frontline Demonstration of Technology"* ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ., ಶ್ರೀ ರಘುರಾಜ ಜೆ., ಡಾ. ಪ್ರದೀಪ್ ಹೆಚ್.ಎಂ., ಶ್ರೀ ಪ್ರಸನ್ನಕುಮಾರ್ ಎನ್. ಮತ್ತು ಶ್ರೀ ವಿಜಯಕುಮಾರ ಎಸ್.ಬಿ. ಇವರುಗಳು ಭಾಗವಹಿಸಿದ್ದರು.
- *Central Institute of Freshwater Aquaculture, Bhuvaneshwar, Orissa* ಇವರು ದಿನಾಂಕ 11-3-2009 ರಿಂದ 13-3-2009 ರ ವರೆಗೆ ಆಯೋಜಿಸಿದ *"Portable FRD carps hatchery: its installation and operation"* ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಮುಖ್ಯಸ್ಥರು ಡಾ. ದೇವರಾಜ ಟಿ.ಎನ್. ಇವರು ಭಾಗವಹಿಸಿದ್ದರು.





- *Central Institute of Agriculture Engineering, Bhopal, Madhyapradesh* ಇವರು ದಿನಾಂಕ 19-3-2009 ರಿಂದ 21-3-2009ರವರೆಗೆ ಆಯೋಜಿಸಿದ *"Improved Equipment and Machinery for crop production and Horticulture"* ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಶ್ರೀಮಲ್ಲಿಕಾರ್ಜುನ ಬಿ.ಓ. ಇವರು ಭಾಗವಹಿಸಿದ್ದರು.

## ವೈಜ್ಞಾನಿಕ ಕ್ಷೇತ್ರ ಬೇಟಿ -



ಕಡಲೆ - ಶೆಟ್ಟಿಹಳ್ಳಿ



ಭತ್ತದ ಬೆಳೆ : ಮಲ್ಲೇನಹಳ್ಳಿ



ಪರ್ಯಾಯ ಬೆಳೆ ಪದ್ಧತಿ : ತೆಂಗು ಮತ್ತು ಕೋಕೋ. ಮಲ್ಲನಾಯ್ಕನಹಳ್ಳಿ, ಹರಿಹರ ತಾಲ್ಲೂಕು.

## ಮುಂಬರುವ ಮೂರು ತಿಂಗಳಿಗೆ ರೈತರಿಗೆ ಕೃಷಿ ಮುನ್ಸೂಚನೆಗಳು:

- ಜಿಲ್ಲೆಯಲ್ಲಿ ಭತ್ತವು ತೆಂಡೆ ಹೊಡೆಯುವ ಹಾಗೂ ಕಾಳು ಕಟ್ಟುವ ಹಂತದಲ್ಲಿದೆ. ತೆಂಡೆ ಹೊಡೆಯುವ ಹಂತದಲ್ಲಿರುವ ಬೆಳೆಗೆ ಶಿಫಾರಸ್ಸಿನ ಶೇಕಡಾ 25 ಸಾರಜನಕ ಹಾಗೂ ಶೇಕಡಾ 25 ರ ಪೊಟ್ಯಾಷ್ ಹಾಕುವುದು. ಕಾಳು ಕಟ್ಟುವ ಹಂತದಲ್ಲಿರುವ ಬೆಳೆಗೆ ಶಿಫಾರಸ್ಸಿನ ಶೇಕಡಾ 25 ರಷ್ಟು ಪೊಟ್ಯಾಷ್ ಒಳಗೊಂಡ ರಸಗೊಬ್ಬರ ಕೊಡುವುದು.
- ಭತ್ತದ ಗದ್ದೆಯಲ್ಲಿ ನಿಂತ ನೀರನ್ನು ಬಸಿದ ಮೇಲೆ ರಸಗೊಬ್ಬರ ನೀಡುವುದು ಸೂಕ್ತ. ಅಗತ್ಯಕ್ಕಿಂತ ಹೆಚ್ಚಿನ ರಸಗೊಬ್ಬರವನ್ನು ನೀಡಬಾರದು.
- ತೊಗರಿಯನ್ನು ಬಿತ್ತನೆ ಮಾಡುವುದಾದರೆ ಮೇ ಕೊನೆಯವಾರದಲ್ಲಿ HY-3C ತಳಿ ಬಳಕೆಮಾಡಿ. ಜೂನ್ ನಂತರ ಬಿತ್ತನೆಗೆ TTB- 7/BRG-1 ಬಳಸಿ (ತರಕಾರಿಗೆ ಸೂಕ್ತ). ಬಿತ್ತನೆ ಮಾಡುವಾಗ ಟ್ರೈಕೋಡರ್ಮದಿಂದ (4ಗ್ರಾಂ/ಕೆಜಿ) ಬೀಜೋಪಚಾರ ಮಾಡಬೇಕು.
- ಏಪ್ರಿಲ್ ಮತ್ತು ಮೇ ಮಾಸದಲ್ಲಿ ಮಳೆ ಬಿದ್ದರೆ ಮೊದಲ ಬೆಳೆಯಾಗಿ ಹೆಸರು ನಂತರ ರಾಗಿ ಜಿಪಿಯು–28 ಬಿತ್ತನೆ ಮಾಡಿ.
- ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿ/ಅವರೆಯನ್ನು ಬೆಳೆಯಿರಿ (8:2)
- ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ರಾಸಾಯನಿಕ ಗೊಬ್ಬರ ಬಳಸಿ.
- ಮಳೆಯ ನಂತರ ಆಳವಾದ ಉಳುಮೆ ಮಾಡಿ
- ಜಾನುವಾರುಗಳಿಗೆ ಮೇ–ಜೂನ್ ತಿಂಗಳಲ್ಲಿ ಕಾಲುಬಾಯಿಬೇನೆ, ಚಪ್ಪೆರೋಗ, ಹಾಗೂ ಗಂಟಲುಬೇನೆ ರೋಗಗಳಿಗೆ ಚುಚ್ಚುಮದ್ದು ಹಾಕಿಸುವುದು ಸೂಕ್ತ.
- ಜಾನುವಾರುಗಳಿಗೆ ಅಧಿಕ ಇಳುವರಿ ನೀಡುವ ಕೋ–3 ಮೇವನ್ನು ಜೂನ್ ತಿಂಗಳಲ್ಲಿ ನಾಟಿ ಮಾಡುವುದು ಸೂಕ್ತ.
- ಹೈನುರಾಸುಗಳನ್ನು ಸಾಕಣೆ ಮಾಡುವ ರೈತರು ಅಜೋಲ್ಲಾವನ್ನು ಬೆಳೆದು ಹಾಲಿನ ಉತ್ಪಾದನೆ ಹೆಚ್ಚಿಸುವುದರ ಜೊತೆಗೆ, ಉತ್ಪಾದನಾ ವೆಚ್ಚವನ್ನು ಕಡಿಮೆಮಾಡಬಹುದಾಗಿದೆ.

## ಭತ್ತದಲ್ಲಿ ಕಂದು ಜಿಗಿಹುಳು ನಿರ್ವಹಣೆ:

ಲಕ್ಷಣ: ಪ್ರೌಢ ಮತ್ತು ಅಪ್ಸರೆ ಜಿಗಿಹುಳು ಕಾಂಡದ ಮೇಲೆ ಆವರಿಸಿ ರಸ ಹೀರುತ್ತವೆ. ನಂತರ ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಸುಟ್ಟಂತೆ ಕಾಣುತ್ತವೆ. ಕಾಳು ತುಂಬದೆ ಜೊಳ್ಳಾಗುತ್ತವೆ.

ಹತೋಟಿ ಕ್ರಮಗಳು: ಇಮಿಡಾಕ್ಲೋಪ್ರಿಡ್ 17.8% ಎಸ್.ಎಲ್ (0.5ಮಿಲೀ/ಲೀ) ಅಥವಾ ಥಯೋಮೆಥಕ್ಸಮ್ 25 ಡಬ್ಲ್ಯು.ಜಿ. (0.5 ಗ್ರಾಂ/ಲೀ) ಸಿಂಪಡಿಸಬೇಕು.

## ಭತ್ತದಲ್ಲಿ ಕಾಂಡಕೊರಕ ನಿರ್ವಹಣೆ:

ಲಕ್ಷಣ: ಪ್ರಾರಂಭದಲ್ಲಿ ಕಾಂಡದ ತಳಭಾಗವನ್ನು ಕೊರೆಯುತ್ತದೆ. ತೆನೆ ಬಿಡುವ ಅಥವಾ ಹಾಲು ತುಂಬುವ ಹಂತದಲ್ಲಿ ತೆನೆಯ ಬುಡವನ್ನು ಕತ್ತರಿಸುವುದರಿಂದ ಬಿಳಿ ತೆನೆಗಳು ಉಂಟಾಗುತ್ತವೆ.

ಹತೋಟಿ ಕ್ರಮಗಳು: ಬದುಗಳ ಸ್ವಚ್ಛತೆ, ಪತಂಗಗಳ ಬೆಳಕಿಗೆ ಆಕರ್ಷಣೆ, ಎಂಡೋಸಲ್ಫಾನ್ 2 ಮಿಲೀ./ಲೀ. ಸಿಂಪರಣೆ

## ಅಡಿಕೆಯಲ್ಲಿ ಪೋಷಕಾಂಶಗಳ ನಿರ್ವಹಣೆ:

ಅಡಿಕೆ ಬೆಳೆಗೆ ಮುಂಗಾರಿನಲ್ಲಿ ಶಿಫಾರಸ್ಸಿನ ಅರ್ಧ ಪ್ರಮಾಣದಷ್ಟು ಯೂರಿಯಾ 108 ಗ್ರಾಂ. ಸಿಂಗಲ್ ಸೂಪರ್ ಫಾಸ್ಫೇಟ್ 125 ಗ್ರಾಂ. ಮ್ಯೂರೇಟ್ ಆಫ್ ಪೊಟ್ಯಾಷ್ 116 ಗ್ರಾಂ. ಮೇ–ಜೂನ್ ತಿಂಗಳಲ್ಲಿ ಕೊಡಬೇಕು. ಉಳಿದರ್ಧ ಪ್ರಮಾಣದ ರಸಗೊಬ್ಬರಗಳನ್ನು ಸೆಪ್ಟಂಬರ್–ಅಕ್ಟೋಬರ್‌ನಲ್ಲಿ ಕೊಡಬೇಕು. ಜೊತೆಗೆ 100ಗ್ರಾಂ. ಟ್ರೈಕೋಡರ್ಮ, 2 ಕೆಜಿ. ಬೇವಿನ ಹಿಂಡಿ, 12 ಕೆಜಿ. ಸಾವಯವ ಗೊಬ್ಬರ ಮತ್ತು 12 ಕೆಜಿ. ಹಸಿರೆಲೆ ಗೊಬ್ಬರ ಪ್ರತಿ ಗಿಡಕ್ಕೆ ಕೊಡಬೇಕು. ರಸಗೊಬ್ಬರಗಳನ್ನು ಗಿಡದಿಂದ 1.5 ಅಡಿ ಅಂತರದಲ್ಲಿ ಪಾತಿ ಮಾಡಿ ಅದರಲ್ಲಿ ಹಾಕಿ ಮಣ್ಣು ಮುಚ್ಚಿ ನೀರನ್ನು ಒದಗಿಸಬೇಕು.

## ಮೀನುಕೃಷಿಗೆ ತಾಂತ್ರಿಕ ಮುನ್ಸೂಚನೆಗಳು:

ಮುಂಗಾರಿಗೆ ಮುನ್ನ, ಲಾಭದಾಯಕ ಮೀನುಕೃಷಿ ಕೈಗೊಳ್ಳಲು ಸೂಕ್ತವಾಗಿರುವ ಜೌಗು/ಕಲ್ಲು/ಅಥವಾ ನೀರು ನಿಲ್ಲುವ ಜಮೀನು ಪ್ರದೇಶವನ್ನು ಗುರುತಿಸಿ, ಕೊಳ ನಿರ್ಮಾಣ ಕೈಗೊಳ್ಳಿ.

ಮಣ್ಣು ಮತ್ತು ನೀರು ಪರೀಕ್ಷೆ ಮಾಡಿಸಿ.

ನಮ್ಮ ತಾಂತ್ರಿಕ ಬೆಂಬಲ ಪಡೆದು, ಸೂಕ್ತ ಮೀನುಮರಿ ಮತ್ತು ಸಂಖ್ಯೆಯನ್ನು ಆಯ್ಕೆಮಾಡಿಕೊಳ್ಳಿ.

ಹಾಗೆಯೇ, ಮೀನುಕೃಷಿ ಮತ್ತು ಇತರ ಕೃಷಿ ಪದ್ಧತಿಗಳನ್ನು ಸಮಗ್ರವಾಗಿ ಜೋಡಣೆಗೊಳಿಸುವ ತಾಂತ್ರಿಕತೆಯ ಬಗ್ಗೆ ಸಂಪೂರ್ಣ ತಿಳುವಳಿಕೆಗಾಗಿ ನಮ್ಮನ್ನು ಸಂಪರ್ಕಿಸಿ.

## ಸಾವಯವ ಕೃಷಿ:

- ಮಣ್ಣಿನ ಫಲವತ್ತತೆಯನ್ನು ಸಮೃದ್ಧಿಗೊಳಿಸಲು ಭತ್ತ ಕಟಾವಾದ ನಂತರ ಎಕರೆಗೆ 25ಕೆಜಿ ಡಯಾಂಚವನ್ನು ಬಿತ್ತುವುದು, ಡಯಾಂಚ ಬೆಳೆಯು ಹೂವಾಗುವುದಕ್ಕೂ ಮುಂಚೆಯೇ (45 ದಿನಗಳೊಳಗೆ) ಭೂಮಿಗೆ ಸೇರಿಸುವುದು.
- ಮೌಲ್ಯವರ್ಧಿತ ಕೊಟ್ಟಿಗೆ ಗೊಬ್ಬರ ಬಳಕೆ (1ಟನ್ ಕೊಟ್ಟಿಗೆ ಗೊಬ್ಬರ + 1 ಕೆಜಿ. ಟ್ರೈಕೋಡರ್ಮ ಮಿಶ್ರಮಾಡಿ 15 ದಿನಗಳ ನಂತರ ಒಂದು ಎಕರೆಗೆ ಬಳಸಬಹುದು).
- ತೋಟಗಾರಿಕಾ ಬೆಳೆಗಳಿಗೆ ಸಾವಯವ ಕೃಷಿ ಅಳವಡಿಕೆ ಹೆಚ್ಚು ಸೂಕ್ತ

ಸಂಪಾದಕರು ಮತ್ತು ಪ್ರಕಾಶಕರು : ಡಾ॥ ದೇವರಾಜ ಟಿ.ಎನ್., ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ - 577 004 , ಕರ್ನಾಟಕ

ದೂರವಾಣಿ ಸಂಖ್ಯೆ.: 08192-260969. ಮಿಂಚಂಚೆ : tkvk@taralabalu.org, dvgtkvk@yahoo.com.

ಸಹ ಸಂಪಾದಕರು : ಶ್ರೀ ಮಲ್ಲಿಕಾರ್ಜುನ ಬಿ. ಓ., ಶ್ರೀ ಬಸವನಗೌಡ ಎಂ.ಜಿ., ಡಾ॥ ಜಯದೇವಪ್ಪ ಜಿ.ಕೆ., ಶ್ರೀ ರಘುರಾಜ ಜೆ., ಶ್ರೀ ಪ್ರಸನ್ನ ಕುಮಾರ ಎಸ್., ಡಾ॥ ಪ್ರದೀಪ್ ಹೆಚ್. ಎಂ., ಕುಮಾರಿ ಕವಿತ ಪಿ., ಶ್ರೀ ವಿಜಯಕುಮಾರ್ ಎಸ್.ಬಿ. ಮತ್ತು ಶ್ರೀ ಸಂತೋಷ್ ಬಿ.

ಮುದ್ರಕರು : ಅಕ್ಷರ ಪ್ರಿಂಟರ್ಸ್, ದಾವಣಗೆರೆ. ಫೋ : 253341.